ಹತ್ತು ವರ್ಷದ ಮಗಳು ರಚನಾ ಈ ಹೊತ್ತು ಜೊತೆಗಿದ್ದಿದ್ದರೆ ವಾತಾವರಣ ಸ್ವಲ್ಪವಾದರೂ ಹಗುರವಾಗಿರುತ್ತಿತ್ತು ಅಂತ ಕುಸುಮಳಿಗೆ ಬಲವಾಗಿ ಅನ್ನಿಸಿತು. ಇಷ್ಟು ದೂರ ಪ್ರಯಾಣದಲ್ಲಿ ತಾನು ಒಂದು ಮಾತನ್ನೂ ಆಡಲಿಲ್ಲವಲ್ಲ ಅಂತ ಕುಸುಮಳಿಗೆ ಆಗ ಹೊಳೆದು, ಜೀವವನ್ನು ಮಗುಚಿ ಹಾಕುವ ಅನುಭವಗಳು ನಮಗೇ ಗೊತ್ತಿಲ್ಲದ ಗೊತ್ತಿಲ್ಲದಿರುವ ನಮ್ಮೊಳಗಿನ ಮೂಲೆಗಳನ್ನು ಹೇಗೆ ತೋರ್ಪಡಿಸುತ್ತವೆ ಎಂದು ಆಶ್ಚರ್ಯವೂ ಆಯಿತು.

ಆಗಲೇ ಸಂಜೆಯಾಗತೊಡಗಿತ್ತು. ಇವರು ಇನ್ನೂ ಬೆಟ್ಟ ಹತ್ತಿ ಇಳಿಯಬೇಕಿತ್ತು. ಸಿಗರೇಟು ಸೇದುತ್ತಿದ್ದ ರಾಮಚಂದ್ರನಿಗೆ ಸಮಯದ ಪರಿವೆಯೇ ಇರಲಿಲ್ಲ. ಬದುಕಿನ ಕೊಂಬೆಯ ಮೇಲೆ ಸಾವು ತುಯ್ಯುತ್ತ ಅವನ ಮನಸ್ಸನ್ನು ತನ್ನತ್ತ ಜಗ್ಗುತ್ತಿತ್ತು. ಅವನು ಕತ್ತೆತ್ತಿ ಆಕಾಶದ ಕಡೆ ಮುಖ ಮಾಡಿ ಸಿಗರೇಟು ಹೊಗೆ ಬಿಟ್ಟ. ಮುಳುಗುವ ಸೂರ್ಯನ ಕೆಂಪು ಎಲ್ಲ ಕಡೆ ಹರಡಿ ಅದರ ನಡುನಡುವೆ ಕಪ್ಪು, ಬೂದು ಮೋಡಗಳು ಏನೇನೋ ಚಿತ್ತಾರ ಮೂಡಿಸಿದ್ದವು. ಸಂತೋಷನನ್ನು ಮೊಟ್ಟಮೊದಲು ನೋಡಿದ್ದು ಎಲ್ಲಿ, ಹೇಗೆ ಎಂದು ನೆನಪಿಸಿಕೊಳ್ಳಲು ರಾಮಚಂದ್ರ ಪ್ರಯತ್ನಿಸಿದ. ನೆನಪಾಗಲಿಲ್ಲ. ಸಂತೋಷನ ಗುಂಡು ಮುಖ, ನಗು ಸ್ಥಾಯಿಯಾಗಿ ಕುಳಿತಂತಿದ್ದ ಅವನ ಕಣ್ಣುಗಳು, ತಡೆದು ತಡೆದು ಆಡುತ್ತಿದ್ದ ಮೆಲುಮಾತು ನೆನಪಾದವು. ಕಣ್ಣು ಮಂಜಾಯಿತು. ಸಿಗರೇಟು ಚುಟ್ಟಿಯನ್ನು ಕೆಳಕ್ಕೆ ಹಾಕಿ ಹೊಸಕಿದ ರಾಮಚಂದ್ರ ಕಾರಿನತ್ತ ತಿರುಗಿದಾಗ ಹತ್ತು ಹೆಜ್ಜೆಗಳಾಚೆ ಕವಲು ರಸ್ತೆಯಲ್ಲಿ ಒಬ್ಬ ವ್ಯಕ್ತಿ ನಿಂತಿರುವುದು ಕಂಡಿತು. ಅವನೆಡೆಗೆ ಹೋದ ರಾಮಚಂದ್ರ, 'ಲಿಂಗದಹಳ್ಳಿಗೆ ಹೋಗುವ ದಾರಿ ಯಾವುದಪ್ಪ?' ಕೇಳಿದ. ಆ ವ್ಯಕ್ತಿಯು ಬಲ ಕವಲನ್ನು ತೋರಿಸುತ್ತ, 'ಈ ದಾರಿನೆ ಸಾ' ಅಂದು ಸೇದುತ್ತಿದ್ದ ಬೀಡಿಯನ್ನು ನೆಲಕ್ಕೆ ಹಾಕಿ ಕಾಲಿನಿಂದ ಹೊಸಕಿದ.

'ಎಷ್ಟು ದೂರ ಇದೆ ಲಿಂಗದಹಳ್ಳಿ?'

'...ಮ್ಮ್...' ಆ ವ್ಯಕ್ತಿಯು ತಲೆ ಕೆರೆಯುತ್ತ 'ಒಂದೈದಾರು ಮೈಲಿರ್ಬೇಕು ಸಾ' ಅಂದ.

ರಾಮಚಂದ್ರ ಇನ್ನೂ ಪೂರ್ತಿಯಾಗಿ ಇತ್ತ ತಿರುಗಿಯೇ ಇಲ್ಲ, ಆ ವ್ಯಕ್ತಿ 'ಸಾ... ನಾನೂ ಲಿಂಗ್ದಳ್ಳಿಗೇ ಹೋಗ್ಬೇಕು... ದಾರಿ ತೋರ್ಸ್ತಿನಿ ಬನ್ನಿ...' ಅಂದು, ರಾಮಚಂದ್ರನ ಪಕ್ಕಕ್ಕೆ ಬಂದು ಅವನಿಗಿಂತ ಒಂದು ಹೆಜ್ಜೆ ಮುಂದೆಯೇ ಹೋದ. ತಾನು ಏನನ್ನಾದರೂ ಹೇಳುವ ಆಯ್ಕೆಯೇ ಇಲ್ಲದ ಹಾಗಿದ್ದ ಆ ವ್ಯಕ್ತಿಯ ಮಾತಿನ ಧ್ವನಿಯು ರಾಮಚಂದ್ರನನ್ನು ಗೊಂದಲಕ್ಕೆ ದೂಡಿತು. ಮೊದಲೇ ರಾಮಚಂದ್ರ ಇಂತಹ ಪರಿಸ್ಥಿತಿಗಳನ್ನು ನಿಭಾಯಿಸುವಲ್ಲಿ ಅಂತಾ ಚಾಣಾಕ್ಷ ಏನಲ್ಲ. ಮೇಲಾಗಿ, ಇವತ್ತು ಅವನ ಮನಸ್ಸಿಡೀ ಸಾವು, ಮನುಷ್ಯ ಬದುಕಿನ ನಿರರ್ಥಕತೆ, ಇದರಿಂದ ಮೂಡಿದ ಭಯ, ಖಾಲಿತನಗಳಿಂದ ತುಂಬಿಕೊಂಡಿತ್ತು. ತಕ್ಷಣಕ್ಕೆ ಅವನಿಗೆ ಆ ಮನುಷ್ಯನಿಗೆ ಏನಾದರೂ ಹೇಳಿ ಸಾಗಹಾಕಲು ರಾಮಚಂದ್ರನಿಗೆ ಹೊಳೆಯಲೇ ಇಲ್ಲ.

ಕುಸುಮ ಇವರಿಬ್ಬರನ್ನೇ ನೋಡುತ್ತಿದ್ದಳು. ಇಬ್ಬರೂ ಕಾರಿನೆಡೆಗೆ ಬಂದರು. ಆ ಮನುಷ್ಯ ಹಿಂಬದಿಯ ಬಾಗಿಲು ತೆಗೆದು ಡ್ರೈವರ್ ಸೀಟಿನ ನೇರಕ್ಕೆ ಕುಳಿತ. ಅವನ ನಂತರ ರಾಮಚಂದ್ರ ಬಂದು ಕುಳಿತ. ಅವಳಿಗೆ ಎದೆ ಹೊಡೆದುಕೊಳ್ಳತೊಡಗಿತು. ಕಾರು ಚಲಿಸಿತು. ಸಿಗರೇಟು, ಬೀಡಿ ವಾಸನೆಯು ಗಪ್ಪನೆ ಕಾರಿನ ಒಳಗೆಲ್ಲ ತುಂಬಿಕೊಂಡು ಕುಸುಮಳಿಗೆ ವಾಕರಿಕೆ ಬಂದಂತಾಗಿ ಕಿಟಕಿ ಗಾಜನ್ನು ಕೆಳಗಿಳಿಸಿದಳು. ಅವನು ಯಾರು, ಏನು, ಎಂತು ಏನೇನೋ ಪ್ರಶ್ನೆಗಳು ನುಗ್ಗಿ ಬರುತ್ತಿದ್ದರೂ ಆಗ ಅದನ್ನೆಲ್ಲ ಕೇಳುವ ಪರಿಸ್ಥಿತಿಯಿರಲಿಲ್ಲ. ಅದನ್ನವಳು ಕೇಳಿದ್ದರೂ ರಾಮಚಂದ್ರನಿಗಾದರೂ ಏನು ಗೊತ್ತಿತ್ತು?

ಕಾರು ಚಲಿಸತೊಡಗಿದಂತೆ ರಾಮಚಂದ್ರನಿಗೆ ಪೀಕಲಾಟ ಶುರುವಾಯಿತು. ಅಚಾತುರ್ಯ ನಡೆದ ಮೇಲೆ 'ಅಯ್ಯೋ ಎಂಥಾ ಕೆಲಸ ಆಗಿಹೋಯ್ತು!' ಅನ್ನಿಸುವ ಪೇಚಾಟ ಅದು. ಸೂರ್ಯ ಅದಾಗಲೆ ಮುಳುಗಲು ಹವಣಿಸುತ್ತಿದ್ದುದನ್ನು, ಉಸಿರು ಹಿಡಿದು ಹಕ್ಕಿಗಳು ಬರ್ರ್ ಬರ್ರ್ ಅಂತ ಹಾರಿಹೋಗುತ್ತಿದ್ದುದನ್ನು ಅವನು ತುದಿಗಣ್ಣಲ್ಲಿ ಗಮನಿಸಿದ್ದು ಆಗಲೆ. ಯಾತಕ್ಕಾದರೂ ನಾನು ಇವನನ್ನು ಕಾರಿಗೆ ಹತ್ತಿಸಿಕೊಂಡೆ! ಏನಾದರೂ ಅವಘಡ ಆಗಿಬಿಟ್ಟರೆ ಏನಪ್ಪಾ ಮಾಡೋದು? ಅಂತೆಲ್ಲ ಅವನು ಯೋಚಿಸುತ್ತಿರಬೇಕಾದರೆ ಘಾಟಿಯ ಸುರುಳಿ ಹಾದಿ ಶುರುವಾಯಿತು. ತಿರುವು ಮುರುವಿನ ರಸ್ತೆಯಲ್ಲಿ ಕಾರು ಬಳಸಿ, ಹೊರಳಿ, ಏರಿಳಿಯತೊಡಗಿತು.